## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ನಿಯಮ 330 ರಡಿ ನೀಡಿರುವ ಸೂಚನೆಗೆ ಉತ್ತರ

**ಪ್ರಶ್ನೆ:**

ಶತ ಶತಮಾನಗಳ ಐತಿಹಾಸಿಕ ನೆಲೆಯನ್ನು ಹೊಂದಿರುವ ಪ್ರಸಿದ್ಧ ಗ್ರಾಮೀಣ ಕ್ರೀಡೆಯಾದ ಕಂಬಳವು ಕರಾವಳಿ ಜಿಲ್ಲೆಯಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಈ ಕ್ರೀಡೆಯು ಇಂದು ಸರಿಯಾದ ಪ್ರೋತ್ಸಾಹವಿಲ್ಲದೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ.

ಕಂಬಳವು ಕರಾವಳಿ ಭಾಗದ ಪುರಾಣ ಪ್ರಸಿದ್ಧ ಕ್ರೀಡೆಯಾಗಿರುತ್ತದೆ. ದೈವಾರಾಧನೆಯೊಂದಿಗೆ ಆರಾಧಿಸುತ್ತ ಬಂದಿರುವ ಜನರೊಂದಿಗೆ ಬೆರೆತಿರುವ ಕ್ರೀಡೆಯಾಗಿರುತ್ತದೆ. ಇದನ್ನು ಕರಾವಳಿ ತೀರದ ಜನತೆ ಅತ್ಯಂತ ಶ್ರದ್ಧಾ ಭಕ್ತಿಯಿಂದ ದೇವರ ಸೇವೆಯೆಂದೇ ತಿಳಿದಿರುತ್ತಾರೆ. ಇಂದು ಕಂಬಳವು ರಾಷ್ಟ್ರದಾದ್ಯಂತ ಪ್ರಸಿದ್ಧಿ ಪಡೆದಿದ್ದು, ಈ ಕಂಬಳ ಕ್ರೀಡೆಯನ್ನು ವೀಕ್ಷಿಸಲು ಕರಾವಳಿ ಭಾಗದ ದೂರ ದೂರ ಪ್ರದೇಶಗಳಿಂದ ಸುಮಾರು 75 ಸಾವಿರದಿಂದ 1 ಲಕ್ಷದವರೆಗೆ ಕಂಬಳ ಅಭಿಮಾನಿಗಳು ಕಂಬಳ ಗದ್ದೆಯ ಬಳಿ ಸೇರಿ ಕಂಬಳ ಕ್ರೀಡೆಯ ಮನೋಹರ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾರೆ.

ಆದರೆ, ಜಾನಪದ ಕ್ರೀಡೆಯಾದ ಕಂಬಳ ಕ್ಷೇತ್ರಕ್ಕೆ ಇಂದು ಸರಿಯಾದ ಸೌಲಭ್ಯ ಸಿಗದೇ ಎಲ್ಲಿ ಈ ಜಾನಪದ ಕ್ರೀಡೆ ಕಣ್ಮರೆಯಾಗುವುದೋ ಎಂಬ ಆತಂಕವು ಇದನ್ನು ನಂಬಿ ಬದುಕುವ ವರ್ಗಕ್ಕೂ ಮತ್ತು ಕಂಬಳ ಅಭಿಮಾನಿಗಳಿಗೂ ಉಂಟಾಗಿದೆ. ಆದ್ದರಿಂದ, ಈ ಕ್ರೀಡೆಗೆ ಉತ್ತೇಜನ ನೀಡಿ ಪ್ರೋತ್ಸಾಹಿಸಲು ಕಂಬಳವನ್ನು ರಾಜ್ಯ ಮಟ್ಟದ ಕ್ರೀಡೆಯಾಗಿ ಹಾಗೂ ಕರಾವಳಿಯ ನಾಡ ಕ್ರೀಡೆಯಾಗಿ ಘೋಷಿಸುವ ಅನಿವಾರ್ಯತೆಯನ್ನು ನಿಯಮ 330 ರಡಿ ಸದನದಲ್ಲಿ ಚರ್ಚಿಸಲು ಅನುಮತಿ ಕೋರುತ್ತೇನೆ.

**ಉತ್ತರ:**

ಕರಾವಳಿ ಭಾಗದ ಸಾಂಪ್ರದಾಯಿಕ ಕಂಬಳ ಕ್ರೀಡೆಯನ್ನು ಪ್ರೋತ್ಸಾಹಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಹಲವು ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ.

ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕಂಬಳ ಕ್ರೀಡೆಯ ಸಾಧಕರಿಗೆ 'ವಿಶೇಷ ಕ್ರೀಡೆ'ಗಳ ಅಡಿಯಲ್ಲಿ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿ ನೀಡಲಾಗುತ್ತಿದೆ. ಈ ಪ್ರಶಸ್ತಿಯು ರೂ 1.00 ಲಕ್ಷ ನಗದು ಪುರಸ್ಕಾರ ಮತ್ತು ಸ್ಮರಣಿಕೆಯನ್ನೊಳಗೊಂಡಿದೆ. 2013 ರಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ವಿವರ ಇಂತಿದೆ.

| ಕ್ರಸ | ಕಂಬಳ ಕ್ರೀಡೆಯ ಸಾಧಕರು | ವರ್ಷ |
|---|---|---|
| 1 | ಶ್ರೀ ಪಲಿಮಾರು ದೇವೇಂದ್ರ ಕೋಟ್ಯಾನ್ | 2013 |
| 2 | ಶ್ರೀ ನಕರೆ ಜಯಕರ ಮಡಿವಾಳ | 2014 |
| 3 | ಶ್ರೀ ಕೊಳಚೂರು ಕೊಂಡೊಟ್ಟು ಸುಕುಮಾರ ಶೆಟ್ಟಿ | 2014 |
| 4 | ಶ್ರೀ ಬಾರಾಡಿಬೀಡು ಡಾ. ಜೀವಂಧರ್ ಬಲ್ಲಾಳ್ | 2015 |
| 5 | ಶ್ರೀ ಆನಂದ್ ಇರ್ವತ್ತೂರ್ | 2015 |
| 6 | ಶ್ರೀ ಯುವರಾಜ್ ಜೈನ್ ನಾರಾವಿ | 2016 |
| 7 | ಶ್ರೀ ಗೋಪಾಲಕೃಷ್ಣ ಪ್ರಭು | 2017 |
| 8 | ಶ್ರೀ ಶ್ರೀನಿವಾಸಗೌಡ | 2017 |
| 9 | ಶ್ರೀ ಸುರೇಶ್ ಶೆಟ್ಟಿ | 2018 |
| 10 | ಶ್ರೀ ಪ್ರವೀಣ್ ಕೋಟ್ಯಾನ್ ಪಣಪಿಲ್ | 2019 |
| 11 | ಶ್ರೀ ಗೋಪಾಲ್ ನಾಯಕ್ | 2020 |
| 12 | ಶ್ರೀ ಶ್ರೀಧರ್ ಮರೋಡಿ | 2021 |

ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಸಂಸ್ಥೆಗಳನ್ನು ಗುರುತಿಸಿ ರೂ 5.00 ಲಕ್ಷ ನಗದು ಪುರಸ್ಕಾರ ಮತ್ತು ಸ್ಮರಣಿಕೆಯನ್ನು ಒಳಗೊಂಡ ಕ್ರೀಡಾ ಪೋಷಕ ಪ್ರಶಸ್ತಿಯನ್ನು

--2

ನೀಡಲಾಗುತ್ತಿದ್ದು, 2017-18ನೇ ಸಾಲಿನ ಕಂಬಳ ಕ್ರೀಡೆಯ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿರುವ ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ (ರಿ). ಕಾರ್ಕಳ, ಉಡುಪಿ ಜಿಲ್ಲೆ ಈ ಸಂಸ್ಥೆಗೆ "ಕ್ರೀಡಾ ಪೋಷಕ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯ 'ವೀರ ರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ'ದಲ್ಲಿ 10 ಎಕರೆ ಜಾಗದಲ್ಲಿ 'ಕೋಟಿ-ಚೆನ್ನಯ್ಯ' ಹೆಸರಿನ ಜೋಡುಕರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಅದೇ ರೀತಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ 5 ಎಕರೆ ನಿವೇಶನದಲ್ಲಿ 'ಲವ-ಕುಶ' ಹೆಸರಿನ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಈ ಕಂಬಳ ಕ್ರೀಡಾಂಗಣಗಳನ್ನು ನಿರ್ಮಿಸಲು ಸರ್ಕಾರವು ಅನುದಾನವನ್ನು ಒದಗಿಸಿದ್ದು, ಪ್ರತಿ ವರ್ಷ ಈ ಕಂಬಳ ಕ್ರೀಡಾಂಗಣಗಳಲ್ಲಿ ಯಶಸ್ವಿಯಾಗಿ ಕಂಬಳವನ್ನು ಆಯೋಜಿಸಲಾಗುತ್ತಿದೆ.

ಕಂಬಳದ ಸಂಘಟನೆಗೆ ಪ್ರಕರಣವಾರು ಪರಿಶೀಲಿಸಿ ಅನುದಾನ ನೀಡಲಾಗುತ್ತಿದ್ದು, 2019-20ನೇ ಸಾಲಿನಲ್ಲಿ ಮೂಡುಬಿದ್ರೆಯಲ್ಲಿ ಆಯೋಜಿಸಲಾದ "ಕೋಟಿ-ಚೆನ್ನಯ್ಯ ಜೋಡು ಕರೆ "ಕಂಬಳಕ್ಕೆ ರೂ 5.00 ಲಕ್ಷ ಅನುದಾನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಒದಗಿಸಲಾಗಿದೆ.

ಹಿಂದಿನ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಮಾನ್ಯ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಉಪಸ್ಥಿತಿಯಲ್ಲಿ ದಿನಾಂಕ: 19-04-2022ರಂದು ನಡೆದ ಸಭೆಯಲ್ಲಿ ರಾಜ್ಯ ಕಂಬಳ ಸಂಸ್ಥೆಯನ್ನು ರಚಿಸಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾನ್ಯತೆ ಪಡೆಯುವ ಕುರಿತಂತೆ ಬೈಲಾ ಸಿದ್ಧಪಡಿಸಿ ಮಾನ್ಯತೆಗಾಗಿ ಸಲ್ಲಿಸುವಂತೆ ತೀರ್ಮಾನಿಸಲಾಗಿದೆ.

ಅದರಂತೆ, ಮಾನ್ಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ರಾಜ್ಯ ಕಂಬಳ ಸಂಸ್ಥೆಯನ್ನು ರಚಿಸುವ ಸಂಬಂಧ ಸೂಕ್ತ ಸಹಕಾರವನ್ನು ನೀಡುವಂತೆ ದಿನಾಂಕ 18-05-2022 ರ ಪತ್ರದಲ್ಲಿ ಕೋರಿದೆ.

ದಿನಾಂಕ 17-06-2022 ರಂದು ಕರ್ನಾಟಕ ರಾಜ್ಯ ಕಂಬಳ ಸಂಸ್ಥೆಯನ್ನು ರಚಿಸಲು ಬೈಲಾ ಮತ್ತು ಮಾರ್ಗಸೂಚಿಯನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಕಂಬಳ ಕ್ರೀಡೆಯ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳನ್ನೊಳಗೊಂಡ ಪೂರ್ವಭಾವಿ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ಬೈಲಾ ಮತ್ತು ಮಾರ್ಗಸೂಚಿಗಳಲ್ಲಿ ಬದಲಾವಣೆಗಳನ್ನು ಕೈಗೊಂಡು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಮಕ್ಷಮ ಉಭಯ ಜಿಲ್ಲೆಗಳ ಜನಪ್ರತಿನಿಧಿಗಳು, ಕಂಬಳ ಕ್ರೀಡಾಸಕ್ತರು, ಕಂಬಳ ಆಯೋಜಕರು, ಕಂಬಳ ಕೋಣಗಳ ಮಾಲೀಕರು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ತಜ್ಞರ ಸಭೆ ನಡೆಸಿ ಅನುಮೋದನೆ ಪಡೆದು ಬೈಲಾವನ್ನು ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಕಂಬಳ ಸಂಸ್ಥೆಯನ್ನು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ನಿಯಮ 1960ರಡಿ ನೋಂದಾಯಿಸಲು ಕ್ರಮಕೈಗೊಳ್ಳಲು ತೀರ್ಮಾನಿಸಲಾಗಿದೆ.

ಕರ್ನಾಟಕ ರಾಜ್ಯ ಕಂಬಳ ಸಂಸ್ಥೆಯು ರಚನೆಗೊಂಡು ಅಗತ್ಯ ದಾಖಲಾತಿಯೊಂದಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾನ್ಯತೆಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ರಾಜ್ಯ ಕಂಬಳ ಸಂಸ್ಥೆಗೆ ರಾಜ್ಯ ಸಂಸ್ಥೆಯಾಗಿ ಮಾನ್ಯತೆ ನೀಡಲು ಮತ್ತು ನಿಯಮಾನುಸಾರ ಆರ್ಥಿಕ ಸಹಾಯಧನ ನೀಡಲು ಕ್ರಮವಹಿಸಲಾಗುವುದು.

ದಿನಾಂಕ 08-01-2023 ಮತ್ತು 09-01-2023 ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಗ್ರಾಮೀಣ ಕ್ರೀಡೋತ್ಸವ ಕ್ರೀಡಾಕೂಟ ಆಯೋಜನೆ ಸಂದರ್ಭದಲ್ಲಿ ಕಂಬಳ ಕ್ರೀಡೆಯನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.

ವೈಎಸ್‌ಡಿ-ಇಬಿಬಿ/21/2023

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು